## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ: 609/2015 ಸಿಡಬ್ಲೂ : 16 ಪಿಡಬ್ಲೂ: 8

ಪ್ರಮಾಣವಚನ ಬೋಧಿಸಲಾಯಿತು ದಿ: 10-10-2025

ಹೆಸರು : ಸಂದೀಪ್ ಸಿಂಗ್

ತಂದೆ ಹೆಸರು : ಪರುಶುರಾಮ್ ಸಿಂಗ್ ಮರುಗೋಳ್

ವಯಸ್ಸು : 45 ವರ್ಷ

ಉದ್ಯೋಗ : ಪಿ ಐ, ಹೇ ಸ್ಕಾಂ ಚಿಕ್ಕೋಡಿ

ವಾಸಸ್ಥಳ : ಚಿಕ್ಕೋಡಿ

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು ಸೆಪ್ಟಂಬರ್ 2013 ರಿಂದ ಮೇ 2015 ವರೆಗೆ ವೃತ್ತ ನಿರೀಕ್ಷಕರು ಸೇಡಂ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಅವದಿಯಲ್ಲಿ ದಿ: 28-02-2015 ರಂದು ಚಾ ಸಾ 15 ರವರಿಂದ ಸದರಿ ಪ್ರಕರಣದ ಕಡತವನ್ನು ಸ್ವೀಕರಿಸಿಕೊಂಡು ಅದೇ ದಿನ ಚಾ ಸಾ 6 ರಿಂದ 10 ರವರ ಹೇಳಿಕೆಯನ್ನು ಪಡೆದುಕೊಡಿರುತ್ತೇನೆ. ನಂತರ ದಿ. 02-03-2015 ರಂದು ಚಾ ಸಾ 1 ಮತ್ತು 6 ರಿಂದ 10 ರವರ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಚಾ ಸಾ 11 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಸದರಿ ಪ್ರಕರಣದಲ್ಲಿ ಅಪಘಾತಕ್ಕೆ ಒಳಗಾದ ಅಶೋಕ್ ಲೈಲಾಂಡ್ ಲಾರಿ ನಂ. ಎಂ ಎಚ್ 12 ಎಚ್ ಡಿ 4724 ನೇದ್ದನ್ನು ಚಾ ಸಾ 11 ರವರಿಗೆ ಮುಚ್ಚಳಿಕೆ ಪತ್ರವನ್ನು ಪಡೆದುಕೊಂಡು ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಆರೋಪಿ ಸತೀಶ್ ಠಾಣೆಗೆ ಹಾಜರಾಗಿ ತನ್ನ ತಪ್ಪನ್ನು ಒಪ್ಪಿ ಕೊಂಡಿರುವುದರಿಂದ ಆತನ ಮೇಲೆ ದಸ್ತಗಿರಿ ಕ್ರಮವನ್ನು ಜರುಗಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ನಂತರ ದಿ.25-03-2015 ರಂದು ಅಪಘಾತಕ್ಕೆ ಒಳಗಾಡ ಇನೊಂದು ವಾಹನ ಸಂಖ್ಯೆ ಕೆ ಎ 32 ಇ ಡಿ 0712 ನೇದ್ದನ್ನು ಚಾ ಸಾ 7 ರವರಿಗೆ ಮುಚ್ಚಳಿಕೆ ಪತ್ರವನ್ನು ಪಡೆದುಕೊಂಡು ಬಿಡುಗಡೆ ಮಾಡಿರುತ್ತೇನೆ. ಸಾಕ್ಷಿಯು ಸದರಿ ಮುಚ್ಚಳಿಕೆ ಪತ್ರವನ್ನು ನೋಡಿ ಈಗ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿ ಪಿ 10 ಮತ್ತು 11 ಎಂದು ಗುರುತಿಸಲಾಯಿತು. ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 10(ಎ) ಮತ್ತು 11(ಎ) ಎಂದು ಗುರುತಿಸಲಾಯಿತು. ನಂತರ ನನ್ನ ವರ್ಗಾವಣೆ ಯಾಗಿರುವುದರಿಂದ ಸದರಿ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ 17 ರವರಿಗೆ ವಹಿಸಿಕೊಂಟ್ಟಿರುತ್ತೇನೆ. ಆರೋಪಿತರಿಗೆ ನೋಡಿದರೆ

ಗುರುತಿಸುತ್ತೇನೆ. (ಈ ದಿನ ಆರೋಪಿತರು ಗೈರು ಹಾಜರು ಇದ್ದರು. ಆರೋಪಿ ಪರ ವಕೀಲರು ಹಾಜರಾತಿ ವಿನಾಯಿತಿ ಕೋರಿ ಅರ್ಜಿಯನ್ನು ಸಲ್ಲಿಸಿ ಆರೋಪಿಯ ಗುರುತಿನ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ವಾದ ಮಂಡಿಸಿರುತ್ತಾರೆ. )

**ಪಾಟೀಸವಾಲುಃ** ಆರೋಪಿ ಪರ ಶ್ರೀ ಸಿ ವಿ ವಕೀಲರಿಂದಃ

ಈ ಅವದಿಯಲ್ಲಿ ದಿಃ 28-02-2015 ರಂದು ಚಾ ಸಾ 15 ರವರಿಂದ ಸದರಿ ಪ್ರಕರಣದ ಕಡತವನ್ನು ಸ್ವೀಕರಿಸಿಕೊಂಡು ಅದೇ ದಿನ ಚಾ ಸಾ 6 ರಿಂದ 10 ರವರ ಹೇಳಿಕೆಯನ್ನು ಪಡೆದುಕೊಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ದಿ. 02-03-2015 ರಂದು ಚಾ ಸಾ 1 ಮತ್ತು 6 ರಿಂದ 10 ರವರ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಚಾ ಸಾ 11 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಸದರಿ ಪ್ರಕರಣದಲ್ಲಿ ಅಪಘಾತಕ್ಕೆ ಒಳಗಾದ ಅಶೋಕ್ ಲೈಲಾಂಡ್ ಲಾರಿ ನಂ. ಎಂ ಎಚ್ 12 ಎಚ್ ಡಿ 4724 ನೇದ್ದನ್ನು ಚಾ ಸಾ 11 ರವರಿಗೆ ಮುಚ್ಚಳಿಕೆ ಪತ್ರವನ್ನು ಪಡೆದುಕೊಂಡು ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದೇ ದಿನ ಆರೋಪಿ ಸತೀಶ್ ಠಾಣೆಗೆ ಹಾಜರಾಗಿ ತನ್ನ ತಪ್ಪನ್ನು ಒಪ್ಪಿ ಕೊಂಡಿರುವುದರಿಂದ ಆತನ ಮೇಲೆ ದಸ್ತಗಿರಿ ಕ್ರಮವನ್ನು ಜರುಗಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ದಿ.25-03-2015 ರಂದು ಅಪಘಾತಕ್ಕೆ ಒಳಗಾಡ ಇನೊಂದು ವಾಹನ ಸಂಖ್ಯೆ ಕೆ ಎ 32 ಇ ಡಿ 0712 ನೇದ್ದನ್ನು ಚಾ ಸಾ 7 ರವರಿಗೆ ಮುಚ್ಚಳಿಕೆ ಪತ್ರವನ್ನು ಪಡೆದುಕೊಂಡು ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ನನ್ನ ವರ್ಗಾವಣೆ ಯಾಗಿರುವುದರಿಂದ ಸದರಿ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ 17 ರವರಿಗೆ ವಹಿಸಿಕೊಂಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**